

# ‘ಪಾತ್ರವೆಂಬುದು ಜಗವ ಕಾಣುವ ಕಿಟಕಿ’

ಶೃಂಗ ಬಿ.ವಿ. ಬೆಂಗಳೂರು ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಪ್ರತಿಭಾವಂತ ನಟ. ಅನನ್ಯಾ ಕಾಸರವಳ್ಳಿ ಅವರ ‘ಹರಿಕಥಾ ಪ್ರಸಂಗ’ ಸಿನಿಮಾ ಮೂಲಕವೂ ಗಮನಸೆಳೆದಿದ್ದ ಅವರು, ಕಿರುತೆರೆಯಲ್ಲಿಯೂ ನಟನೆಯ ಛಾಪು ಮೂಡಿಸಿದವರು. ಅಚ್ಯುತಕುಮಾರ್ ನಿರ್ದೇಶನದ ‘ಕೊಳ’ ನಾಟಕದಲ್ಲಿನ ನಟನೆಗೆ ‘ಮೆಟಾ ನಾಟಕೋತ್ಸವ’ದಲ್ಲಿ ಅತ್ಯುತ್ತಮ ನಟ ಪ್ರಶಸ್ತಿಗೆ ಭಾಜನರಾಗಿದ್ದಾರೆ.

■ ಸಂದರ್ಶನ: **ಪದ್ಮನಾಭ ಭಟ್**

ಚಿತ್ರಗಳು: ಆನಂದ ಬಕ್ಷಿ

◆ **‘ಮೆಟಾ’ ನಾಟಕೋತ್ಸವದ ಕುರಿತು ಹೇಳಿ.**

‘ಮೆಟಾ’ ನಾಟಕೋತ್ಸವದ ಬಗ್ಗೆ ನನಗೆ ಮೊದಲಿನಿಂದಲೂ ಕುತೂಹಲ. ನನಗೆ ಆ ನಾಟಕೋತ್ಸವಕ್ಕೆ ಹೋಗಲು ಸಾಧ್ಯವಾಗಲಿಲ್ಲವಲ್ಲ ಎಂದೂ ಅನಿಸುತ್ತಿತ್ತು. ಇದೇ ಮೊದಲ ಬಾರಿಗೆ ನಾನು ಆ ನಾಟಕಕ್ಕೆ ಹೋಗಿದ್ದು. ತುಂಬ ವ್ಯವಸ್ಥಿತವಾಗಿ ಸಂಘಟನೆ ಮಾಡಲಾಗುತ್ತದೆ.

‘ಮಹೀಂದ್ರಾ ಎಕ್ಸೆಲೆನ್ಸ್ ಫಾರ್ ಥಿಯೇಟರ್ ಅವಾರ್ಡ್ಸ್’ ಪ್ರತಿವರ್ಷವೂ ನಡೆಯುತ್ತದೆ. ದೇಶದ ಬೇರೆ ಬೇರೆ ಭಾಗಗಳಿಂದ ನಾಟಕಗಳು ಸ್ಪರ್ಧೆಯಲ್ಲಿರುತ್ತವೆ. ಈ ಸಲ ಎಂಟು ನಾಟಕಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿದ್ದವು. ಅದರಲ್ಲಿ ಅಚ್ಯುತಕುಮಾರ್ ನಿರ್ದೇಶನದ ‘ಕೊಳ’ ನಾಟಕವೂ ಇತ್ತು. ನಮ್ಮ ನಾಟಕ ಬೆಸ್ಟ್ ಕಾಸ್ಟ್ಯೂಮ್, ಬೆಸ್ಟ್ ಡೈರೆಕ್ಷನ್ ಮತ್ತು ಬೆಸ್ಟ್ ಡ್ರಾಮಾ ಈ ಮೂರು ವಿಭಾಗಗಳಲ್ಲಿ ನಾಮನಿರ್ದೇಶನವಾಗಿತ್ತು. ನನ್ನ ಹೆಸರು ಮೊದಲು ನಾಮನಿರ್ದೇಶನ ಆಗಿರಲಿಲ್ಲ. ಅವತ್ತು ನಾಟಕ ನೋಡಿದ ಜ್ಯೂರಿ ನನ್ನ ನಟನೆ ನೋಡಿ ನನ್ನ ಹೆಸರನ್ನು ‘ಅತ್ಯುತ್ತಮ ನಟ’ ವಿಭಾಗಕ್ಕೆ ನಾಮನಿರ್ದೇಶನ ಮಾಡಿದ್ದರು. ನಾಮನಿರ್ದೇಶನವಾಗಿರುವುದು ನನಗೆ ಗೊತ್ತಿಲ್ಲದಿದ್ದುದರಿಂದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿಯೂ ನಾನು ಇರಲಿಲ್ಲ. ಆ ಸಮಯದಲ್ಲಿ ಬೇರೆ ನಾಟಕ ನೋಡುತ್ತಿದ್ದೆ.

◆ **ನೀವು ರಂಗಭೂಮಿಯ ಆಸಕ್ತಿ ಬೆಳೆಸಿಕೊಂಡಿದ್ದು ಹೇಗೆ?**

ನನ್ನ ತಂದೆ ಶಿವಮೊಗ್ಗದವರು, ತಾಯಿ ಧಾರವಾಡದವರು. ನಾನು ಹುಟ್ಟಿದ್ದು ಬೆಳಗಾವಿಯಲ್ಲಿ. ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿ. ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್. ಎಂಜಿನಿಯರಿಂಗ್ ಮೂರನೇ ಸೆಮಿಸ್ಟರ್‌ನಲ್ಲಿದ್ದಾಗ ರಂಗಭೂಮಿಯತ್ತ ಆಸಕ್ತಿ ಬೆಳೆಸಿಕೊಂಡಿದ್ದು.

ನನ್ನ ತಂದೆ ‘ಬೆನಕ’ ನಾಟಕತಂಡದಲ್ಲಿ ಅಭಿನಯಿಸುತ್ತಿದ್ದರು. ‘ಗೋಕುಲ ನಿರ್ಗಮನ’ ನಾಟಕಕ್ಕೆ ಹೊಸ ಹುಡುಗರನ್ನು ಹುಡುಕುತ್ತಿದ್ದರು. ತಂದೆ ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಆಗ ನನಗೆ ರಂಗಭೂಮಿ ಬಗ್ಗೆ ಏನೂ ಗೊತ್ತಿರಲಿಲ್ಲ. ಆದರೆ ಆ ವಾತಾವರಣವೇ ತುಂಬ ಇಷ್ಟವಾಯ್ತು. 2004ರಲ್ಲಿ ನಟಿಸಿದ ‘ಗೋಕುಲ ನಿರ್ಗಮನ’ ನನ್ನ ಮೊದಲ ನಾಟಕ. ನಂತರ ಮೂರು ವರ್ಷ ನಾಟಕಗಳನ್ನು ಮಾಡುತ್ತಲೇ ಎಂಜಿನಿಯರಿಂಗ್ ಮುಗಿಸಿದೆ. ಆ ಸಮಯದಲ್ಲಿಯೇ ರಂಗಶಂಕರದ ಪರಿಚಯವೂ ಆಗಿತ್ತು. ‘ಗುಮ್ಮ ಬಂದ ಗುಮ್ಮ’ ನಾಟಕಕ್ಕೂ ಆಯ್ಕೆಯಾಗಿದ್ದೆ. ಅದು 2007. ಆಗಲೇ ನಾನು ನಟನಾಗಬೇಕು ಎಂದು ನಿರ್ಧರಿಸಿದೆ.

◆ **ಧಾರಾವಾಹಿ ಮತ್ತು ಸಿನಿಮಾಗಳಲ್ಲಿಯೂ ನಟಿಸಿದ್ದೀರಲ್ಲವೇ?**

ನನಗೆ ಮೊದಲು ಧಾರಾವಾಹಿಯಲ್ಲಿ ನಟಿಸುವ ಅವಕಾಶ ಕೊಡಿಸಿದ್ದು ಯಶ್. 2005ರಲ್ಲಿ ‘ಪ್ರೀತಿ ಇಲ್ಲದ ಮೇಲೆ’ ಧಾರಾವಾಹಿಯಲ್ಲಿ ನಟಿಸಿದ್ದೆ. ಆಗ ಅವರೆಲ್ಲ ‘ಇವನ್ಯಾಕೆ ಇಲ್ಲಿಗೆ ಬಂದ, ಪಾಪ’ ಅನ್ನುವ ಹಾಗೆ ನಟಿಸಿದ್ದೆ. ಅದಾದ ಮೇಲೆ 2009ರಲ್ಲಿ ‘ಕುಸುಮಾಂಜಲಿ’ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಆಗ ನಟನೆಯ ಬಗ್ಗೆ ಕೊಂಚ ತಿಳಿದುಕೊಂಡಿದ್ದೆ. ನಂತರ ಸಿಹಿಕಹಿ ಚಂದ್ರು ನಿರ್ದೇಶನದ ‘ಬದುಕು ಮಾಯೆಯ ಆಟ’ ಧಾರಾವಾಹಿಯಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದೆ. ಇತ್ತೀಚೆಗೆ ಕೆ.ಎಂ. ಚೈತನ್ಯ ಅವರ ‘ಪ್ರೀತಿಯೆಂದರೇನು’ ಧಾರಾವಾಹಿಯಲ್ಲಿ ನಟಿಸಿದೆ.

ನಾನು ‘ಬಾಯ್ ವಿತ್ ಎ ಸೂಟ್‌ಕೇಸ್’ ಅಂತ ಅಂತರರಾಷ್ಟ್ರೀಯ ಸಹಯೋಗದ ಒಂದು ನಾಟಕದಲ್ಲಿ ನಟಿಸಿದ್ದೆ. ಅದನ್ನು ನೋಡಿದ ಕೆ.ಎಂ. ಚೈತನ್ಯ ಅವರು ‘ಪರಾರಿ’ ಸಿನಿಮಾದಲ್ಲಿ ಅವಕಾಶ ಕೊಟ್ಟರು. ಅದಾದ ಮೇಲೆ ‘ರಿಂಗ್ ಮಾಸ್ಟರ್’, ‘ರಿಂಗ್ ರೋಡ್ ಶುಭಾ’ ಸಿನಿಮಾಗಳಲ್ಲಿಯೂ ನಟಿಸಿದೆ. ಆದರೆ ಇಂದಿಗೂ ನಾನು ಹೆಮ್ಮೆಯಿಂದ ಹೇಳಿಕೊಳ್ಳುವ ಸಿನಿಮಾ ಅನನ್ಯಾ ಕಾಸರವಳ್ಳಿ ಅವರ ‘ಹರಿಕಥಾ ಪ್ರಸಂಗ’ ಸಿನಿಮಾ. ಅದಾದ